# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 337
2. ಸದಸ್ಯರ ಹೆಸರು : ಶ್ರೀ ವೈ.ಎಂ.ಸತೀಶ್
3. ಉತ್ತರಿಸಬೇಕಾದ ದಿನಾಂಕ : 07-12-2023
4. ಉತ್ತರಿಸುವವರು : ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.

| ಕ್ರ.ಸ | ಪ್ರಶ್ನೆ | ಉತ್ತರ |
|---|---|---|
| ಅ | ಸಿರಗುಪ್ಪ ತಾಲ್ಲೂಕಿನ ವೇದಾವತಿ ಹಗರಿ ನದಿಗೆ ಮುದೇನೂರು ಗ್ರಾಮದ ಹತ್ತಿರ ಸೇತುವೆ ಮತ್ತು ಬಾಂದಾರ ನಿರ್ಮಾಣ ಕಾಮಗಾರಿ ನಡೆಯುತ್ತಿರುವುದು ನಿಜವೇ; ಹಾಗಿದ್ದಲ್ಲಿ, ಇದಕ್ಕೆ ನೀಡಲಾದ ಅನುದಾನ ಎಷ್ಟು; ಇದರ ಕಾಮಗಾರಿ ಯಾವ ಹಂತದಲ್ಲಿದೆ; ಈ ಗುತ್ತಿಗೆಯನ್ನು ಯಾರಿಗೆ, ಯಾವ ಷರತ್ತುಗಳೊಂದಿಗೆ ಯಾವ ಕಾಲಮಿತಿಯ ಒಳಗಡೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ನೀಡಲಾಗಿದೆ; | ಬಳ್ಳಾರಿ ಜಿಲ್ಲೆ ಸಿರುಗುಪ್ಪ ತಾಲ್ಲೂಕಿನ ಮುದೇನೂರು ಹಾಗೂ ಬಲಕುಂದಿ ಗ್ರಾಮಗಳ ನಡುವೆ ವೇದಾವತಿ ನದಿಗೆ ಅಡ್ಡಲಾಗಿ ಸೇತುವೆ ಸಹಿತ ಬಂದಾರ ನಿರ್ಮಾಣ ಕಾಮಗಾರಿಯನ್ನು ಕೈಗೊಳ್ಳಲಾಗಿರುತ್ತದೆ.<br>ಸದರಿ ಸೇತುವೆ ಸಹಿತ ಬಂದಾರ ನಿರ್ಮಾಣ ಕಾಮಗಾರಿಗೆ ಡಿಎಂಎಫ್ ಬಳ್ಳಾರಿ ವತಿಯಿಂದ ರೂ. 17.50 ಕೋಟಿ, ಇಲಾಖಾವತಿಯಿಂದ ರೂ. 30.45 ಕೋಟಿ, ಒಟ್ಟಾರೆ ರೂ.47.95ಕೋಟಿಗಳ ಅನುದಾನ ಒದಗಿಸಲಾಗಿರುತ್ತದೆ.<br>ಸದರಿ ಕಾಮಗಾರಿಯನ್ನು ಶ್ರೀ ರಾಘವೇಂದ್ರ ಪ್ರಭಾಕರ ಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು, ಬೆಂಗಳೂರು ಇವರಿಗೆ ಎರಡು ವರ್ಷಗಳ (ಮಳೆಗಾಲ ಸೇರಿ) ಅವಧಿ ಅಂದರೆ ದಿನಾಂಕ: 02.10.2024ರ ಒಳಗಾಗಿ ಕೆ.ಟಿ.ಪಿ.ಪಿ ನಿಯಮ ಕೆ.ಡಬ್ಲ್ಯೂ-4 ಅನ್ವಯ ಪೂರ್ಣಗೊಳಿಸುವ ಷರತ್ತಿನೊಂದಿಗೆ ವಹಿಸಿಕೊಡಲಾಗಿರುತ್ತದೆ. |
| ಆ | ಮುದೇನೂರು ಗ್ರಾಮದ ಬಳಿ ವೇದಾವತಿ ಹಗರಿ ನದಿಗೆ ಕಟ್ಟುತ್ತಿರುವ ಸೇತುವೆ ಬಾಂದಾರ ಕಾರ್ಯ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಯಾವ ಕಾರಣಕ್ಕೆ ಈ ಕಾಮಗಾರಿ ಸ್ಥಗಿತಗೊಂಡಿದೆ; (ವಿವರ ನೀಡುವುದು) | ವೇದಾವತಿ ನದಿಯಲ್ಲಿ ನೀರು ಹರಿಯುತ್ತಿರುವ ಕಾರಣ ಕಾಮಗಾರಿ ಸ್ಥಗಿತಗೊಂಡಿತ್ತು, ಈಗ ನದಿಯಲ್ಲಿ ನೀರಿನ ಹರಿವು ಕಡಿಮೆಯಾಗಿರುವುದರಿಂದ ಕಾಮಗಾರಿಯನ್ನು ಪುನರಾರಂಭಿಸಲಾಗಿದೆ. |
| ಇ | 3-4 ಸಾವಿರ ಹೆಕ್ಟೇರ್ ಪ್ರದೇಶಕ್ಕೆ ನೀರನ್ನೊದಗಿಸುವ ಈ ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣ ಗೊಳಿಸಲಾಗುವುದು; ಕಾಮಗಾರಿ ಆರಂಭದಲ್ಲಿ ಗುತ್ತಿಗೆದಾರರೊಂದಿಗೆ ಆಗಿರುವ ಒಡಬಂಡಿಕೆ ಏನು? (ಮಾಹಿತಿ ನೀಡುವುದು) | ಸದರಿ ಯೋಜನೆಯಿಂದ 500 ಹೆಕ್ಟೇರ್ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿರುತ್ತದೆ. ಗುತ್ತಿಗೆ ಷರತ್ತಿನಂತೆ ಕಾಮಗಾರಿಯನ್ನು ದಿನಾಂಕ: 02.10.2024ರ ಒಳಗಾಗಿ ಪೂರ್ಣಗೊಳಿಸಬೇಕಾಗಿರುತ್ತದೆ. ಸದರಿ ಕಾಮಗಾರಿಯನ್ನು ಮಳೆಗಾಲ ಸೇರಿ ಎರಡು ವರ್ಷಗಳ ಅವಧಿಯೊಳಗಾಗಿ ಅಂದರೆ ದಿನಾಂಕ:02.10.2024 ರೊಳಗಾಗಿ ಪೂರ್ಣಗೊಳಿಸಲು ಗುತ್ತಿಗೆದಾರರೊಂದಿಗೆ ಒಡಬಂಡಿಕೆಯಾಗಿರುತ್ತದೆ. |

ಕಡತ ಸಂಖ್ಯೆ: ಎಂಐಡಿ 60 ಎಲ್‌ಸಿಕ್ಯೂ 2023

**(ಎನ್.ಎಸ್. ಭೋಸರಾಜು)**
ಸಣ್ಣ ನೀರಾವರಿ, ವಿಜ್ಞಾನ ಮತ್ತು
ತಂತ್ರಜ್ಞಾನ ಸಚಿವರು.